ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1060 / 2024.

ಫ್ರಾ.ಸಾ.: 2
ಚಾ.ಸಾ.: 2

| | | |
|---|---|---|
| ಹೆಸರು | : | ಸರಿತ |
| ಗಂಡನ ಹೆಸರು | : | ಮಮುಣಿ ಎಂ. ಎ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಗೃಹಿಣಿ |
| ವಿಳಾಸ | : | ಬೆಳುಘರು |

... ......................................................................................................... ...

ದಿನಾಂಕ 1 ನೇ ಫೆಬ್ರವರಿ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

1. ಚಾಸಾಃ 1 ರವರ ಪರಿಚಯ ಇರುತ್ತದೆ, ಅವರು ನನ್ನ ಪತಿ. ಆರೋಪಿ ಪರಿಚಯ ಇರುತ್ತದೆ,ಅವರು ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ದಿ. 24.03.2024 ರಂದು ನನಗೆ ಹುಷಾರಿಲ್ಲದ ಕಾರಣ ಚಾಸಾ 1 ರವರು ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತಾರೆ. ನಂತರ ಮ. 02.00 ಗಂಟೆಗೆ ಮನೆಗೆ ಬಂದು ನೋಡಿದಾಗ ಮನೆಯ ಕಬೋರ್ಡ್ ನಲ್ಲಿ ಇದ್ದ ಬಟ್ಟೆ ಕಾಟ್ರೆಜ್ ಬೀರು ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಆಗ ಗಾಡ್ರೇಜ್ ನಲ್ಲಿದ್ದ 24 ಗ್ರಾಂ ಬಂಗಾರದ 2 ಎಳೆಚೈನ್ ಮತ್ತು Philips radio ಕಾಣೆಯಾಗಿರುವುದು ಕಂಡು ಬಂತು. ನಂತರ ನಾವು ಪಕ್ಕದ ಮನೆಯವರನ್ನು ಕರೆದು, ನಮ್ಮ ಮನೆಯ ಹಿಂಭಾಗ ಹೋಗಿ ನೋಡಿದಾಗ ಗೋಡೆಯ ಪಕ್ಕ ಇದ್ದ ಕಬ್ಬಿಣದ ಏಣಿ ಹತ್ತಿ ಮನೆಯ ಹಂಚನ್ನು ತೆಗೆದು, ಶೀಟನ್ನು ಮುರಿದು ಮನೆಯ ಒಳಗಡೆ ಹೋಗಿರುವುದು ಕಂಡು ಬಂದಿರುತ್ತದೆ. ಆ ಸಮಯದಲ್ಲಿ ಆರೋಪಿ ಅಲ್ಲಿ ಇರಲಿಲ್ಲ. ನಂತರ ನಾವು ಶ್ರೀಮಂಗಲ ಪೊ. ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇವೆ.

2. ಅದೇ ದಿನ ಸಾಯಂಕಾಲ ಪೊಲೀಸರು ಮನೆಗೆ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ. ನಂತರ ದಿ. 15.04.2024 ರಂದು ಪೊಲೀಸರು ಆರೋಪಿಯನ್ನು ಕರೆದುಕೊಂಡು ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ.

ನಮಗೆ ಕಳುವಾದ ಚೈನ್ ಸಿಕ್ಕಿರುತ್ತದೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ದೃಶ್ಯ ಮಾಧ್ಯಮದಿಂದ ಹಾಜರುಪಡಿಸಿದ್ದನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ.

ಮುಖ್ಯ ವಿಚಾರಣೆ ಃ ಮುಕ್ತಾಯ

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ. ಹೆಚ್. ಎನ್ ವಕೀಲರಿಂದಃ

1. ಆರೋಪಿಯೇ ಕೆಲಸ ಬೇಕೆಂದು ಕೇಳಿಕೊಂಡು ಬಂದಿರುತ್ತಾರೆ. ಆರೋಪಿ 9 ದಿನದಿಂದ ಕೆಲಸಕ್ಕೆ ಬಂದಿರುತ್ತಾರೆ. ಈ ಹಿಂದೆ ಆರೋಪಿಯು ಯಾರ ಮನೆಯಲ್ಲಿ ಕೆಲಸ ಮಾಡುತ್ತಿದ್ದನು ಎಂದು ಗೊತ್ತಿಲ್ಲ. ಆರೋಪಿ ಒಬ್ಬನೇ ಕೆಲಸ ಕೇಳಿಕೊಂಡು ಬಂದಿರುತ್ತಾನೆ. ಆರೋಪಿಯ ಬಗ್ಗೆ ನಾವು ಯಾವುದೇ ವಿಚಾರಣೆ ಮಾಡಿರುವುದಿಲ್ಲ. ನಾನು ಗೋಣಿಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿರುತ್ತೇನೆ. ಪೊಲೀಸರು ನನ್ನ ಕಡೆಯಿಂದ ಆಸ್ಪತ್ರೆಗೆ ಹೋಗಿದ್ದ ಬಗ್ಗೆ ದಾಖಲೆಯನ್ನು ಪಡೆದುಕೊಂಡಿಲ್ಲ. ನಮ್ಮ ಅಕ್ಕಪಕ್ಕದ ಮನೆಯವರಿಗೆ ನಾನು ದೂರವಾಣಿ ಕರೆ ಮಾಡಿ ಕರೆದಿರುತ್ತೇನೆ. ಆಗ ಭೀಮಯ್ಯ ಮತ್ತು ಪೂಣಚ್ಚ ಎಂಬುವವರು ಹಾಗೂ ಪೊಲೀಸರು ಸಮಯ 06.00 ಗಂಟೆಗೆ ಬಂದಿರುತ್ತಾರೆ.

2. ಆರೋಪಿಯು ನಮ್ಮ ತೋಟದಲ್ಲಿ ಮೆಣಸನ್ನು ಕುಯ್ಯುವ ಕೆಲಸ ಮಾಡುತ್ತಿದನು. ಆರೋಪಿಯೇ ಕಳ್ಳತನ ಮಾಡಿದ್ದಾನೆ ಎಂದು ಯಾವುದೇ ಪ್ರತ್ಯಕ್ಷ ಸಾಕ್ಷಿದಾರರು ನೋಡಿಲ್ಲ ಎಂದರೆ ಸರಿ. ಆರೋಪಿಗೂ, ಈ ಪ್ರಕರಣಕ್ಕೂ, ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಮುಕ್ತಾಯ

<u>ಮರು ವಿಚಾರಣೆ : -</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ) ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.